ಅಧ್ಯಕ್ಷರು :- ಕಾರ್ಯದರ್ಶಿರವರ ವರದಿಯನ್ನು ಸದನದ ಮುಂದೆ ಮಂಡಿಸಲಾಯಿತು

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಪಿ. ಪ್ರಕಾಶ್ : (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಸಚಿವರು)

I ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ)ಅವರ ಪರವಾಗಿ

1956ರ ಕರ್ನಾಟಕ ಸಚಿವರುಗಳ ವೇತನ ಮತ್ತು ಭತ್ಯೆಗಳ ಅಧಿನಿಯಮದ ನಿಯಮ 12 (2ಎ) (ಬಿ) ಮೇರೆಗೆ :

(1) ರಾಜ್ಯದ ವಸತಿ ಸಚಿವರಾದ ಶ್ರೀ ಹೆಚ್.ಡಿ. ರೇವಣ್ಣ ಇವರು ಬ್ಯಾಂಕಾಕ್, ಸಿಂಗಾಪುರ್, ನ್ಯೂಜಿಲೆಂಡ್ ಮತ್ತು ಕೌಲಾಲಂಪುರ ದೇಶಗಳಿಗೆ 28-05-1998ರಿಂದ 10-06-1999ರವರೆಗೆ ಪ್ರವಾಸ ಕೈಗೊಳ್ಳಲು ಮಂಜೂರಾತಿ ನೀಡಿ 27-05-1999ರಂದು ಹೊರಡಿಸಿದ ಡಿಪಿಎಆರ್:129:ಜಿಎಎಮ್: 98ನೇ ಸಂಖ್ಯೆಯ ಆದೇಶ,

(2) ರಾಜ್ಯದ ನೀರಾವರಿ ಸಚಿವರಾದ ಶ್ರೀ ಕೆ. ನಾಗೇಗೌಡ ಇವರು ಸ್ಕಾಟ್‌ಲ್ಯಾಂಡ್, ಇಂಗ್ಲೆಂಡ್ ಇಲ್ಲಿ ಜರುಗಿದ ಅಂತರಾಷ್ಟ್ರೀಯ ಜಲಕಾಯಿದೆ ಮತ್ತು ನೀತಿಯ ಬಗೆಗಿನ ಸಮ್ಮೇಳನದಲ್ಲಿ 06-06-1999ರಿಂದ 09-06-1999ರವರೆಗೆ ಪಾಲ್ಗೊಳ್ಳಲು ಮಂಜೂರಾತಿ ನೀಡಿ 02-06-1999ರಂದು ಹೊರಡಿಸಿದ ಡಿಪಿಎಆರ್: 57:ಜಿಎಎಮ್:99ನೇ ಸಂಖ್ಯೆಯ ಆದೇಶ

(3) ರಾಜ್ಯದ ಸಾರಿಗೆ ಸಚಿವರಾದ ಶ್ರೀ ಬಿ.ಎನ್ ಬಚ್ಚೇಗೌಡ, ಇವರು ಬ್ರೆಜಿಲ್ ಮತ್ತು ಸ್ವೀಡನ್ ದೇಶಗಳಿಗೆ 08--06-1999ರಿಂದ 2ವಾರಗಳ ಕಾಲ ಭೇಟಿ ನೀಡಲು ಮಂಜೂರಾತಿ ನೀಡಿ 07-06-1999ರಂದು ಹೊರಡಿಸಿದ ಡಿಪಿಎಆರ್:56:ಜಿಎಎಮ್:99ನೇ ಸಂಖ್ಯೆಯ ಆದೇಶಗಳನ್ನು ಮಂಡಿಸುತ್ತೇನೆ.

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ ಅನುಚ್ಛೇದ 8ರ ಮೇರೆಗೆ :

(4) ಕರ್ನಾಟಕ ಲೋಕೋಪಯೋಗಿ (ನೀರಾವರಿ ಸೇವೆಗಳು) (ಸಹಾಯಕ ಅಭಿಯಂತರರು) (ಕಿರಿಯ ಅಭಿಯಂತರರುಗಳ ನೇಮಕಾತಿ) (ವಿಶೇಷ)ನಿಯಮಾವಳಿಗಳು 1998ನ್ನು ರಚನೆ ಮಾಡುವ ಸಂಬಂಧದಲ್ಲಿ ದಿನಾಂಕ : 14-01-1999ರಂದು ಹೊರಡಿಸಿದ ಡಿಪಿಎಆರ್:48 : ಎನ್‌ಆರ್‌ಡಿ : 97ನೇ ಸಂಖ್ಯೆಯ ಅಧಿಸೂಚನೆ,

(5) ಕರ್ನಾಟಕ ನಾಗರೀಕ ಸೇವೆಗಳ (ಅನುಕಂಪದ ಆಧಾರದ ನೇಮಕಾತಿ) (ತಿದ್ದುಪಡಿ)ನಿಯಮಾವಳಿಗಳು 1998ನ್ನು ರಚಿಸುವ ಸಂಬಂಧದಲ್ಲಿ 31-3-1999ರಂದು ಹೊರಡಿಸಿದ ಡಿಪಿಎಆರ್: 11 :ಎಸ್‌ಸಿಎ: 97ನೇ ಸಂಖ್ಯೆಯ ಅಧಿಸೂಚನೆ,

(6) ಕರ್ನಾಟಕ ಅಬಕಾರಿ ಸೇವೆಗಳ(ನೇಮಕಾತಿ) (ತಿದ್ದುಪಡಿ)ನಿಯಮಗಳು 1998ನ್ನು ರಚಿಸುವ ಸಂಬಂಧದಲ್ಲಿ 09-03-1999ರಂದು ಹೊರಡಿಸಿದ ಡಿಪಿಎಆರ್ :61 ಎಸ್‌ಆರ್‌ಡಿ : 98ನೇ ಸಂಖ್ಯೆಯ ಅಧಿಸೂಚನೆ,

(7) ಕರ್ನಾಟಕ ಸರ್ಕಾರದ ಸಚಿವಾಲಯದ (ನೇಮಕಾತಿ)(2ನೇ ತಿದ್ದುಪಡಿ)ನಿಯಮಗಳು 1997ರಚಿಸುವ ಸಂಬಂಧದಲ್ಲಿ 24-02-1999ರಂದು ಹೊರಡಿಸಿದ ಡಿಪಿಎಆರ್: 61:ಎಸ್‌ಆರ್‌ಡಿ: 97 (1)ಸಂಖ್ಯೆಯ ಅಧಿಸೂಚನೆ,

(8) ಕರ್ನಾಟಕ ನಾಗರೀಕ ಸೇವೆಗಳ (ರಾಜ್ಯ ನಾಗರೀಕ ಸೇವೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ವೈದ್ಯಾಧಿಕಾರಿಗಲ ವಿಲೀನತೆ) (ವಿಶೇಷ) ನಿಯಮಗಳು 1998ನ್ನು ರಚಿಸುವ ಸಂಬಂಧದಲ್ಲಿ 23-12-1998ರಂದು ಹೊರಡಿಸಿದ ಡಿಪಿಎಆರ್:89 :ಎಸ್ಆರ್ಡಿ: 97ನೇ ಸಂಖ್ಯೆಯ ಅಧಿಸೂಚನೆ,

(9) ಕರ್ನಾಟಕ ಕೈಮಗ್ಗ ಮತ್ತು ಜವಳಿ ಸೇವೆಗಳು (ನೇಮಕಾತಿ)ನಿಯಮಗಳು 1996ನ್ನು ರಚಿಸುವ ಸಂಬಂಧದಲ್ಲಿ 10-03-1999ರಂದು ಹೊರಡಿಸಿದ ಡಿಪಿಎಆರ್:57 : ಎಸ್ಆರ್ಡಿ: 95ನೇ ಸಂಖ್ಯೆಯ ಅಧಿಸೂಚನೆ,

(10) ಕರ್ನಾಟಕ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆ ಸೇವೆಗಳು (ವರ್ಕ್ಚಾರ್ಜ್ಸಿಬ್ಬಂದಿಯಲ್ಲಿ ನೇಮಕಗೊಂಡ ನೌಕರರುಗಳ ವಿಲೀನತೆ) (ವಿಶೇಷ) ನಿಯಮಗಳು 1997ರಚಿಸುವ ಸಂಬಂಧದಲ್ಲಿ 09-04-1999ರಂದು ಹೊರಡಿಸಿದ ಡಿಪಿಎಆರ್ 24:ಎಸ್ಆರ್ಡಿ:97ನೇ ಸಂಖ್ಯೆಯ ಅಧಿಸೂಚನೆ,

(11) ಕರ್ನಾಟಕ ಸಿವಿಲ್ ಸೇವೆಗಳು (ರಹಸ್ಯ ವರದಿಗಳು) ನಿಯಮಗಳು 1985ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 1994ಕ್ಕೆ ತಿದ್ದುಪಡಿಯ ಸಂಬಂಧದಲ್ಲಿ 01-06-1999ರಂದು ಹೊರಡಿಸಿದ ಡಿಪಿಎಆರ್5:ಎಸಿಆರ್: 98ನೇ ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ 23 ಮೇರೆಗೆ

(12) ಕರ್ನಾಟಕ ಲೋಕಾಯುಕ್ತ (ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ) ನಿಯಮಗಳ 1998ರಚನೆ ಮಾಡುವ ಸಂಬಂಧದಲ್ಲಿ 20-03-1999ರಂದು ಹೊರಡಿಸಿದ ಡಿಪಿಎಆರ್:8ಎಸ್ಎಲ್ಯು:98ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ರಾಜ್ ಸಚಿವರು):-

ll ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) ಅವರ ಪರವಾಗಿ

1932ರ ಮೈಸೂರು ಪಣ ತೆರಿಗೆ ಕಾಯ್ದೆ ಕಲಂ 8ಎ(2)ಮೇರೆಗೆ :

(1) 31-03-1998ರಂದು ಹೊರಡಿಸಲಾಗಿದ್ದ ಎಫ್ಡಿ–2:ಸಿಆರ್ಸಿ : 98ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ತಂದ ಸಂಬಂಧದಲ್ಲಿ 19-03-1999ರಂದು ಹೊರಡಿಸಲಾದ ಎಫ್ಡಿ : 35 ಸಿಆರ್ಸಿ:97ನೇ ಸಂಖ್ಯೆಯ ಅಧಿಸೂಚನೆ

(2) ಬೆಂಗಳೂರು ಮತ್ತು ಮೈಸೂರು ನಗರಗಳ ಟೋಟಲೈಜರ್ಗಳು ನೀಡಬೇಕಾಗಿರುವ ಪರವಾನಗಿ ಶುಲ್ಕ ಸಂಬಂಧದಲ್ಲಿ 31-03-1999ರಂದು ಹೊರಡಿಸಿದ ಎಫ್ಡಿ:5ಸಿಆರ್ಸಿ:99 (1)ನೇ ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆ ಕಲಂ 31ರ ಮೇರೆಗೆ:

(3) ರಾಜ್ಯದಲ್ಲಿನ ಹೊಸ ಉಕ್ಕು ಕಾರ್ಖಾನೆಗಳಿಗೆ ಸರಬರಾಜು ಮಾಡುವ ಯಂತ್ರೋಪಕರಣಗಳ ಮೇಲೆ ಪ್ರವೇಶ ತೆರಿಗೆ ವಿನಾಯಿತಿ ನೀಡಿ 27-03-1999ರಂದು ಹೊರಡಿಸಿದ ಎಫ್ಡಿ : 33 ಸಿಆರ್ಟಿ : 98ನೇ ಸಂಖ್ಯೆಯ ಅಧಿಸೂಚನೆ,

(4) 15-11-1996ರಂದು ಹೊರಡಿಸಿದ್ದ ಎಫ್‌ಡಿ:22 ಸಿಎಸ್‌ಎಲ್: 96(5)ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ 23-04-1999ರಂದು ಹೊರಡಿಸಿದ ಎಫ್‌ಡಿ : 86 : ಸಿಎಸ್‌ಎಲ್:99 (1)ಸಂಖ್ಯೆಯ ಅಧಿಸೂಚನೆ

(5) 350 ಕೋಟಿ ರೂ. ಗಳಿಗಿಂತ ಹೆಚ್ಚಿಗೆ ಬಂಡವಾಳ ಹೂಡಿ ಕೈಗಾರಿಕಾ ಘಟಕಗಳಿಗೆ ಸರಬರಾಜು ಮಾಡಿಕೊಳ್ಳುವ (ಕಾಂಪೋನೆಂಟ್)ಸಾಮಗ್ರಿಗಳ ಮೇಲೆ ಪಾವತಿಸಬೇಕಾದ ಪ್ರವೇಶ ತೆರಿಗೆಗೆ 6ವರ್ಷಗಳ ಕಾಲ ಕೆಲವು ಷರತ್ತುಗಳ ಮೇಲೆ ವಿನಾಯಿತಿ ನೀಡಿ30-03-1999ರಂದು ಹೊರಡಿಸಿದ ಎಫ್‌ಡಿ:127 :ಸಿಎಸ್‌ಎಲ್: 98 (3) ಸಂಖ್ಯೆಯ ಅಧಿಸೂಚನೆ,

(6) ಶೇ 100ಹಾಗೂ ಶೇ 50ರಷ್ಟು ರಫ್ತು ಪಡಿಸುವಂತಹ ಸಾಮಗ್ರಿಗಳನ್ನು ಉತ್ಪಾದಿಸುವ ರಾಜ್ಯದ ಕೈಗಾರಿಕಾ ಘಟಕಗಳಿಗೆ ಉಪಯೋಗಿಸುವ ಕಚ್ಚಾ ಸಾಮಗ್ರಿಗಳ ಮೇಲೆ ಪ್ರವೇಶ ತೆರಿಗೆ ವಿನಾಯತಿ ನೀಡಿ 24-05-1999ರಂದು ಹೊರಡಿಸಿದ ಎಫ್‌ಡಿ 175 : ಸಿಇಟಿ : 98ನೇ ಸಂಖ್ಯೆಯ ಅಧಿಸೂಚನೆ

(7) ಗದಗ ಜಿಲ್ಲೆಯ ಹುಲ್ಕೋಟಿ ತಾಲ್ಲೂಕಿನ ಆರೋಗ್ಯ ಸೇವೆಗಳ ಸಂಘಕ್ಕೆ ದಾನವಾಗಿ ನೀಡಿದ ಅಂಬುಲೆನ್ಸ್ ವಾಹನಕ್ಕೆ ಸಾರ್ವಜನಿಕರ ಹಿತ ದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಪ್ರವೇಶ ತೆರಿಗೆ ವಿನಾಯಿತಿ ನೀಡಿ 05-05-1999ರಂದು ಹೊರಡಿಸಿದ ಎಫ್‌ಡಿ:23:ಸಿಇಟಿ:98ನೇ ಸಂಖ್ಯೆಯ ಅಧಿಸೂಚನೆ

(8) 01-04-1999ರಿಂದ ಪ್ಲಾಸ್ಟಿಕ್ ಸಾಮಗ್ರಿಗಳ ಮೇಲೆ ಪ್ರವೇಶ ತೆರಿಗೆ ವಿನಾಯತಿ ನೀಡಿ 31--03-1999ರಂದು ಹೊರಡಿಸಿದ ಎಫ್‌ಡಿ:40ಸಿಇಡಿ:40:99 (1ಮತ್ತು 2)ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ಕಲಂ 39ರ ಮೇರೆಗೆ:

(9) ಬೆಂಗಳೂರು ಬಿಎಂಟಿಸಿ ಸಂಸ್ಥೆಗಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ನೀಡಿದ ಗುತ್ತಿಗೆ ಕೆಲಸಗಳ ವಹಿವಾಟಿಗೆ ಸಂಬಂಧಿಸಿದ ವಿಷಯದಲ್ಲಿ ನೀಡಬೇಕಾದ ತೆರಿಗೆಗೆ ವಿನಾಯಿತಿ ನೀಡಿ 12-03-1999ರಂದು ಹೊರಡಿಸಿದ ಎಫ್‌ಡಿ:15:ಸಿಎಸ್‌ಎಲ್: 98ನೇ ಸಂಖ್ಯೆಯ ಅಧಿಸೂಚನೆ

(10) ಆಂಧ್ರಪ್ರದೇಶ ಬೇಗಂಪೇಟ್ ಹೈದರಾಬಾದ್ ಇಲ್ಲಿ ನ ಐಸಿಆರ್‌ಐಎಸ್‌ಎಟಿ ಸಂಸ್ಥೆಯವರಿಗೆ ರಾಜ್ಯದಲ್ಲಿನ ಡೀಲರ್‌ಗಳು ಮಾರಾಟ ಮಾಡುವ ವಸ್ತುಗಳ ಮೇಲೆ ಪಾವತಿಸಬೇಕಾದ ವಿನಾಯಿತಿ ನೀಡಿ12-03-1999ರಂದು ಹೊರಡಿಸಿದ ಎಫ್‌ಡಿ:136:ಸಿಎಸ್‌ಎಲ್:98ನೇ ಸಂಖ್ಯೆಯ ಅಧಿಸೂಚನೆ

(11) 01-04-1999ರಿಂದ ಒಂದು ವರ್ಷಗಳ ಕಾಲ ಅವಲಕ್ಕಿ , ಮಂಡಕ್ಕಿ, ಮೇಣದಬತ್ತಿ, ಗಣಕ ಯಂತ್ರಗಳು ಹಾಗೂ ಮತ್ತಿತರ ವಸ್ತುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ವಿನಾಯತಿ:ತೆರಿಗೆ ಕಡಿತಗೊಳಿಸಿ ದಿನಾಂಕ:31-03-1999ರಂದು ಹೊರಡಿಸಿದ ಎಫ್‌ಡಿ:86 ಸಿಎಸ್‌ಎಲ್: 99 (1ರಿಂದ23) ಸಂಖ್ಯೆಯ ಅಧಿಸೂಚನೆಗಳು

(12) 15-06-1996ರಂದು ಹೊರಡಿಸಿದ್ದ ಎಫ್‌ಡಿ:32:ಸಿಎಸ್‌ಎಲ್:99 (4) ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ 23-04-1999ರಂದು ಹೊಡಿಸಿದ್ದ ಎಫ್‌ಡಿ:86:ಸಿಎಸ್‌ಎಲ್ : 99 (1)ಸಂಖ್ಯೆಯ ಅಧಿಸೂಚನೆ

(13) ಧಾರವಾಡದ ಮೆ:ಟಾಟಾ ಇಂಜಿನಿಯರಿಂಗ್ ಮತ್ತು ಲೋಕೋಮೋಟಿವ್ ಕಂಪನಿ ಲಿಮಿಟೆಡ್ ಸಂಸ್ಥೆಯು ತಯಾರಿಸಿ ಮಾರಾಟ ಮಾಡುವ ವಸ್ತುಗಳ ಮೇಲೆ ಪಾವತಿಸಬೇಕಾದ ತೆರಿಗೆಗೆ 12 ವರ್ಷಗಳ ಕಾಲ ವಿನಾಯಿತಿ ನೀಡಿ 30-04-1999ರಂದು ಹೊರಡಿಸಿದ ಎಫ್‌ಡಿ: 127: ಸಿಎಸ್‌ಎಲ್:98(1)ನೇ ಸಂಖ್ಯೆಯ ಅಧಿಸೂಚನೆ

(14) ಧಾರವಾಡದ ಮೆ:ಟಾಟಾ ಇಂಜಿನಿಯರಿಂಗ್ ಮತ್ತು ಲೋಕೊಮೋಟಿವ್ ಕಂಪನಿ ನಿಯಮಿತರವರು ಉತ್ಪಾದಿಸಿ ಅಂತರ ರಾಜ್ಯಗಳಲ್ಲಿ ಮಾರಾಟ ಮಾಡುವ ಸಾಮಗ್ರಿಗಳ ಮೇಲೆ ಪಾವತಿಸಬೇಕಾದ ಕೇಂದ್ರ ಮಾರಾಟ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ:30-04-1999ರಂದು ಹೊರಡಿಸಿದ ಎಫ್‌ಡಿ:127 :ಸಿಎಸ್‌ಎಲ್:98 (2)ನೇ ಸಂಖ್ಯೆಯ ಅಧಿಸೂಚನೆ

(15) ಧಾರವಾಡದ ಮೆ:ಟಾಟಾ ಇಂಜಿನಿಯರಿಂಗ್ ಮತ್ತು ಲೋಕೋಮೋಟಿವ್ ಕಂಪನಿ ನಿಯಮಿತದವರಿಗೆ ಒಂದು ಕೋಟಿ ಅಥವಾ ಆದಕ್ಕಿಂತ ಹೆಚ್ಚಿನ ವಹಿವಾಟಿಗೆ ರಾಜ್ಯದಲ್ಲಿನ ನೊಂದಾಯಿತ ವರ್ತಕರು ಮಾರಾಟ ಮಾಡುವ ಯಂತ್ರಗಳು ಹಾಗೂ ಉಪಕರಣಗಳ ಮೇಲೆ ನೀಡಬೇಕಾದ ಮಾರಾಟ ತೆರಿಗೆ ವಿನಾಯಿತಿ ನೀಡಿ 30-04-1999ರಂದು ಹೊರಡಿಸಿದ ಎಫ್‌ಡಿ127 : ಸಿಎಸ್‌ಎಲ್ : (3ಮತ್ತು 4)ನೇ ಸಂಖ್ಯೆಯ ಅಧಿಸೂಚನೆಗಳು

(16) ಗಣಕ ಯಂತ್ರಗಳಿಗೆ ಸಂಬಂಧಿಸಿದಂತೆ ವರ್ತಕರು ನಡೆಸುವ ಅಂತರಾಜ್ಯ ವಹಿವಾಟಿನ ಮೇಲೆ ಶೇ 2ರಷ್ಟು ಮಾರಾಟ ತೆರಿಗೆ ನಿಗಧಿಪಡಿಸಿ 04-05-1999ರಂದು ಹೊರಡಿಸಿದ ಎಫ್‌ಡಿ: 183: ಸಿಎಸ್‌ಎಲ್: 99ನೇ ಸಂಖ್ಯೆಯ ಅಧಿಸೂಚನೆ,

(17) ನೈಕ್ಲೊಪೋಗಿನ್, ಡೆಸ್‌ಪೋರೋಮೈನ್, ಈ ಔಷಧಿಗಳ ಮೇಲಿನ ಮಾರಾಟ ತೆರಿಗೆಯನ್ನು 01-03-2000ಇಸವಿಯವರೆಗೆ ವಿನಾಯಿತಿ ನೀಡಿದ ಸಂಬಂಧದಲ್ಲಿ 20-05-1999ರಂದು ಹೊರಡಿಸಿದ ಎಫ್‌ಡಿ 33 : ಸಿಎಸ್‌ಎಲ್:99ನೇ ಸಂಖ್ಯೆಯ ಅಧಿಸೂಚನೆ,

(18) ಹತ್ತಿ ವಹಿವಾಟಿನ ಮೇಲಿನ ಮಾರಾಟ ತೆರಿಗೆಗೆ ವಿನಾಯಿತಿ ಸಂಬಂಧದಲ್ಲಿ 18-05-1999ರಂದು ಹೊರಡಿಸಿದ ಎಫ್‌ಡಿ;170: ಸಿಎಸ್‌ಎಲ್: 95 (ಪಿ)ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ ಮೇರೆಗೆ :

(19) ಕರ್ನಾಟಕ ಸರ್ಕಾರದ ಕುಟುಂಬ ನಿವೃತ್ತಿ ವೇತನ ನಿಯಮಗಳಿಗೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ17-02-1999ರಂದು ಎಫ್‌ಡಿ :2 : ಎಸ್‌ಆರ್‌ಎ :97ನೇ ಸಂಖ್ಯೆಯ ಅಧಿಸೂಚನೆ,

(20) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 57ಕ್ಕೆ ತಿದ್ದುಪಡಿ ಮಾಡಿ 23-02-1999ಹಾಗೂ24-02-1999ರಂದು ಹೊರಡಿಸಿದ ಎಫ್‌ಡಿ:4ಎಫ್‌ಡಿ:ಎಆರ್‌ಎ: 98ಹಾಗೂ ಎಫ್‌ಡಿ:5 ಎಫ್‌ಆರ್‌ಎ:98ನೇ ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : (ವಿರೋಧಪಕ್ಷದ ನಾಯಕರು) :-ಮಾನ್ಯಅಧ್ಯಕ್ಷರೆ, ಏಕೆ ಪದೇ ಪದೇ ಹೇಳುತ್ತೇವೆಂದು ತಾವು ಬೇಸರ ಪಡಬೇಡಿ. ಮಂತ್ರಿಗಳಿಗೆ ಏನು ಅರ್ಜೆಂಟ್ ಕೆಲಸ?ಮಾನ್ಯ ಮುಖ್ಯಮಂತ್ರಿಗಳಿಗೆ ಹುಷಾರಿಲ್ಲವೆಂದು ಹೇಳಿದ್ದೀರಿ, ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಎಲ್ಲಾ ಮಂತ್ರಿಗಳು ಎಲ್ಲಿ ಹೋದರು?

ಅಧ್ಯಕ್ಷರು : ಎಲ್ಲರೂ ಇಲ್ಲೇ ಇದ್ದರು.

ಶ್ರೀಮಲ್ಲಿಕಾರ್ಜುನ ಖರ್ಗೆ : ಮಂತ್ರಿಗಳು ತಮ್ಮ ಪರ್ಮಿಷನ್ ತೆಗೆದುಕೊಂಡು ಹೋಗಿದ್ದಾರೆಯೇ? ಕೌನ್ಸಿಲ್‌ಗೆ ಹೋದರೆ ಎಲ್ಲರಿಗೂ ಏನು ಕೆಲಸ ಅಲ್ಲಿ ? ಕೌನ್ಸಿಲ್‌ನಲ್ಲಿ ಕೆಲಸವಿದೆ ಅಂದರೆ ನಮ್ಮದು ಅಭ್ಯಂತರವಿಲ್ಲ. If you are satisfied, we are satisfied.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರನ್ನು ಏಕೆ ಮುಜುಗರದಲ್ಲಿ ಸಿಕ್ಕಿಸಬೇಕು ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಾಗೆಂದರೆ ಏನು ಅರ್ಥ ? ಸೀರಿಯಸ್ ವಿಷಯ ಇದು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಅನೇಕ ಸದಸ್ಯರ ಅಭಿಪ್ರಾಯ ನಿಜವಾಗಲೂ ನನಗೆ ಮುಜುಗರ ಉಂಟು ಮಾಡತಕ್ಕದ್ದು. ಅಧ್ಯಕ್ಷರನ್ನು ಈ ವಿಚಾರದಲ್ಲಿ ಎಳೆಯತಕ್ಕದ್ದು ಆಗತ್ಯವಿಲ್ಲ ದಯವಿಟ್ಟು ಕ್ಷಮಿಸಬೇಕು.

ಶ್ರೀಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

III ಶ್ರೀ ಎಸ್.ಎಸ್.ಪಾಟೀಲ್(ಸಹಾಕರ ಸಚಿವರು)ಅವರ ಪರವಾಗಿ

ಭಾರತ ಸಂವಿಧಾನದ ಅನುಚ್ಛೇದ 213(1)ರ ಮೇರೆಗೆ

(1) 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ನಿಯಮ 28ಎ ಗೆ ತಿದ್ದುಪಡಿ ಮಾಡಿ ದಿನಾಂಕ 6.5.99ರಂದು ಹೊರಡಿಸಿದ ಸಂವ್ಯಾಶಾ ೧ : 48:ಶಾಸನ:98ನೇ ಸಂಖ್ಯೆಯ ಅದ್ಯಾದೇಶವನ್ನು ಮಂಡಿಸುವುದು.

1999ರ ಸಹಕಾರ ಸಂಘಗಳ ಕಾಯ್ದೆ ಕಲಂ135 ಮೇರೆಗೆ :

(2) 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ ನಿಯಮ 18(8)ಕ್ಕೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ 26-11-1996ರಂದು ಹೊರಡಿಸಿದ ಸಿಎಂಡಬ್ಲ್ಯೂ : 83ಸಿಎಲ್‌ಎಂ:98ನೇ ಸಂಖ್ಯೆಯ ಅಧಿಸೂಚನೆ

(3)ಸಹಕಾರ ಸಂಘಗಳ ಚುನಾವಣೆ ನಡೆಸಲು ಕಾಲಾವಕಾಶ ನೀಡಿರುವ ಸಂಬಂಧದಲ್ಲಿ 15-02-1999ರಂದು ಹೊರಡಿಸಿದ ಸಮತೂ :15ಸಿಎಲ್‌ಎಂ:99ನೇ ಸಂಖ್ಯೆಯ ಅಧಿಸೂಚನೆ

(4) 1960 ರ ಸಹಕಾರ ಸಂಘಗಳ ನಿಯಮಾವಳಿ ನಿಯಮ 13ಎ ಮತ್ತು 14ಕ್ಕೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ 26-03-1999ರಂದು ಹೊರಡಿಸಿದ ಸಿಎಂಡಬ್ಲ್ಯೂ: 159: ಸಿಎಲ್‌ಎಮ್: 98ನೇ ಸಂಖ್ಯೆಯ ಅಧಿಸೂಚನೆ

(5) 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ ನಿಯಮ 25ಕ್ಕೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ 10-03-1999ರಂದು ಹೊರಡಿಸಿದ ಸಿಎಂಡಬ್ಲ್ಯೂ:100 ಸಿಎಲ್‌ಎಮ್:98ನೇ ಸಂಖ್ಯೆಯ ಅಧಿಸೂಚನೆ,

(6) 1960ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ ನಿಯಮ 18ಕ್ಕೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ28-03-1998ರಂದು ಹೊರಡಿಸಿದ ಸಿಎಂಡಬ್ಲ್ಯೂ : 105:ಸಿಎಲ್‌ಎಮ್:97ನೇ ಸಂಖ್ಯೆಯ ಅಧಿಸೂಚನೆ

(7) 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ ನಿಯಮ 18ಕ್ಕೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ 31-10-1998ರಂದು ಹೊರಡಿಸಿದ ಸಿಎಂಡಬ್ಲ್ಯೂ:30ಸಿಎಲ್‌ಎಮ್: 98ನೇ ಸಂಖ್ಯೆಯ ಅಧಿಸೂಚನೆ

(8) 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ ನಿಯಮ 21ಎ.ಗೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ 7-11-1998ರಂದು ಹೊರಡಿಸಿದ ಸಿಎಂಡಬ್ಲ್ಯೂ:48 : ಸಿಎಲ್‌ಎಮ್98ನೇ ಸಂಖ್ಯೆಯ ಅಧಿಸೂಚನೆ

(9) 1960ರ ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿ ನಿಯಮ 22ಕ್ಕೆ ತಿದ್ದುಪಡಿ ಮಾಡಿದ ಸಂಬಂಧದಲ್ಲಿ 10-11-1997ರಂದು ಹೊರಡಿಸಿದ ಸಿಎಂಡಬ್ಲ್ಯೂ:261 : ಸಿಎಲ್‌ಎಮ್98ನೇ ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :-

IV ಶ್ರೀ ಎಂ.ಎಸ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) ಅವರ ಪರವಾಗಿ

1961ರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ74ರ ಮೇರೆಗೆ:

(1) 1999ರ ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ (ತಿದ್ದುಪಡಿ)ನಿಯಮಗಳನ್ನು ರಚಿಸಿ26-02-1999ರಂದು ಹೊರಡಿಸಿದ ಯುಡಿಡಿ.24:ಎಂಐಬಿ: 98ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

V ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು)ಅವರ ಪರವಾಗಿ

1964ರ ಕರ್ನಾಟಕ ಭೂ ಕಂದಾಯ ಅಧಿನಿಯಮದ 194 (1) (11)ನೇ ಕಲಂಗಳ ಮೇರೆಗೆ:

(1) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನ 229ಗ್ರಾಮಗಳಲ್ಲಿನ 97-98ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡುವ ಸಂಬಂಧದಲ್ಲಿ 19-01-1999ರಂದು ಹೊರಡಿಸಿದ ಆರ್‌ಡಿ:473:ಟಿಆರ್‌ಎಂ:98ನೇ ಸಂಖ್ಯೆಯ ಅಧಿಸೂಚನೆ

(2) ಗುಲ್ಬರ್ಗಾ ಜಿಲ್ಲೆಯ ಯಾದಗಿರಿ ತಾಲ್ಲೂಕಿನ 139ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡಿದ ಸಂಬಂಧದಲ್ಲಿ ದಿನಾಂಕ: 27-01-1999ರಂದು ಹೊರಡಿಸಿದ ಆರ್‌ಡಿ: 329:ಬಿಆರ್‌ಎಂ:98ಸಂಖ್ಯೆಯ ಅಧಿಸೂಚನೆ,

(3) ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ 158ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡಿದ ಸಂಬಂಧದಲ್ಲಿ ದಿನಾಂಕ: 28-01-1999ರಂದು ಹೊರಡಿಸಿದ ಆರ್‌ಡಿ:330: ಟಿಆರ್‌ಎಂ:98ಸಂಖ್ಯೆಯ ಅಧಿಸೂಚನೆ

(4) ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ್ ತಾಲ್ಲೂಕಿನ81ಗ್ರಾಮಗಳ 1997-98ನೇ ಸಾಲಿನ ಭೂಕಂದಾಯವನ್ನು ಮನ್ನಾ ಮಾಡಿದ ಸಂಬಂಧದಲ್ಲಿ ದಿನಾಂಕ: 30-01-1999ರಂದು ಹೊರಡಿಸಿದ ಆರ್‌ಡಿ:309: ಟಿಆರ್‌ಎಂ:98ನೇ ಸಂಖ್ಯೆಯ ಅಧಿಸೂಚನೆ

(5) ಗುಲ್ಬರ್ಗಾ ಜಿಲ್ಲೆಯ ಶೋರಾಪುರ ತಾಲ್ಲೂಕಿನ 186ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡಿದ ಸಂಬಂಧದಲ್ಲಿ ದಿನಾಂಕ: 03-02-1999ರಂದು ಹೊರಡಿಸಿದ ಆರ್‌ಡಿ:331 :ಟಿಆರ್‌ಎಂ:98ನೇ ಸಂಖ್ಯೆಯ ಅಧಿಸೂಚನೆ

(6) ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ 140ಗ್ರಾಮಗಳಲ್ಲಿನ1997-98ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡುವ ಸಂಬಂಧದಲ್ಲಿ -02-03-1999ರಂದು ಹೊರಡಿಸಿದ ಆರ್‌ಡಿ:325 ಟಿಆರ್ ಎಂ: 98ನೇ ಸಂಖ್ಯೆಯ ಅಧಿಸೂಚನೆ.

(7) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ 129 ಗ್ರಾಮಗಳಲ್ಲಿನ 1997-98ನೇ ಸಾಲಿನ ಭೂ ಕಂದಾಯವನ್ನು ಮನ್ನಾ ಮಾಡುವ ಸಂಬಂಧದಲ್ಲಿ 03-01-1999ರಂದು ಹೊರಡಿಸಿದ ಆರ್‌ಡಿ327 ಟಿ ಆರ್‌ಎಂ:98ನೇ ಸಂಖ್ಯೆಯ ಅಧಿಸೂಚನೆ

1957ಕರ್ನಾಟಕ ಮುದ್ರಾಂಕ ಅಧಿನಿಯಮದ 9 (2)ಕಲಂ ಮೇರೆಗೆ:-

(8) ಉಡುಪಿ ತಾಲ್ಲೂಕು ಬೆಳಪು ಗ್ರಾಮದಲ್ಲಿ ಕೆ ಐ.ಎ.ಡಿ.ಬಿ.ಯಿಂದ ಮಂಜೂರಾದ ಜಮೀನಿನ ಲೀಜ್ ನೋಂದಣಿಗೆ ಸಂಬಂಧಿಸಿದಂತೆ ಮಂಗಳೂರು ಪವರ್ ಕಂಪನಿ ಇವರಿಗೆ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ನೀಡಿ ದಿನಾಂಕ 02-02-1999ರಂದು ಹೊರಡಿಸಲಾದ ಕಂ ಇ:420ಮುನೋಮು:98ನೇ ಸಂಖ್ಯೆಯ ಆದೇಶ

(9) ಶ್ರೀ ಮಂಜುನಾಥೇಶ್ವರ ವಿದ್ಯಾ ಸಂಸ್ಥೆ ಉಜಿರೆ (ಧರ್ಮಸ್ಥಳ)ಇವರು ಧಾರವಾಡ ಸಮೀಪ ಸುತ್ತೂರು ಗ್ರಾಮದಲ್ಲಿ ಖರೀದಿಸಿದ ಜಮೀನಿನ ನೋಂದಣಿಗಾಗಿ ತಗಲುವ ಮುದ್ರಾಂಕ ಶುಲ್ಕಕ್ಕೆ ವಿನಾಯತಿ ನೀಡಿ ದಿನಾಂಕ 25-03-1999ರಂದು ಹೊರಡಿಸಲಾದ ಕಂ ಇ:71:ಮುನೋಮು99ನೇ ಸಂಖ್ಯೆಯ ಆದೇಶ

(10) ಕೇಂದ್ರೀಯ ವಿದ್ಯಾಲಯ , ಮಂಗಳೂರು ಇವರು ರೈಲ್ವೆ ಇಲಾಖೆಯಿಂದ ಪಡೆದ ಜಮೀನಿನ ನೋಂದಣಿ ಸಂಬಂಧದಲ್ಲಿ ಮುದ್ರಾಂಕ ಶುಲ್ಕಕ್ಕೆ ವಿನಾಯತಿ ನೀಡಿ ದಿನಾಂಕ 09-03-1999ರಂದು ಹೊರಡಿಸಿದ ಕಂ ಇ :400 ಮುನೋಮು:98ರ ಸಂಖ್ಯೆಯ ಆದೇಶ

1964 ಕರ್ನಾಟಕ ಭೂಕಂದಾಯ ಕಾಯ್ದೆ 198 ರ ಕಲಂ ಮೇರೆಗೆ

(11) 1966ಕರ್ನಾಟಕ ಭೂಕಂದಾಯ ನಿಯಮಗಳ ನಿಯಮ198ಕ್ಕೆ ತಿದ್ದುಪಡಿ ಮಾಡಿ ದಿನಾಂಕ17-2-1999ರಂದು ಹೊರಡಿಸಿದ ಆರ್‌ಡಿ: 59ಎಲ್‌ಬಿಪಿ:98ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

VI ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :-
ಶ್ರೀ ಬಿ.ಎ.ಮೊಯಿದ್ದೀನ್ (ಉನ್ನತ ಶಿಕ್ಷಣ ಸಚಿವರು) ಅವರ ಪರವಾಗಿ
ಭಾರತ ಸಂವಿಧಾನದ 213 (1)ನೇ ಅನುಚ್ಛೇದದ ಮೇರೆಗೆ:-

(1) ಕನ್ನಡ ವಿಶ್ವವಿದ್ಯಾನಿಲಯ ಅಧಿನಿಯಮಕ್ಕೆ ತಿದ್ದುಪಡಿ ತರುವ ಸಂಬಂಧದಲ್ಲಿ 29-4-99ರಂದು ಹೊರಡಿಸಿದ ಸಂಪ್ರಶಾಇ:15 : ಶಾಸನ : 99ರ ಸಂಖ್ಯೆಯ ಅಧ್ಯಾದೇಶವನ್ನು

1984ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಪ್ರೋಹಿಬಿಷನ್ ಆಫ್ ಕ್ಯಾಪಿಟೇಶನ್ ಫೀ)ಅಧಿನಿಯಮದ ನಿಯಮ 14(2) ಮೇರೆಗೆ :

(2) 1999 ವೈದ್ಯಕೀಯ ದಂತ ಹಾಗೂ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶ(ತಿದ್ದುಪಡಿ) ನಿಯಮಾವಳಿಗಳನ್ನು ರಚಿಸಿ19-03-1999ರಂದು ಹೊರಡಿಸಿದ ಆಡಿ: 115:ಟಿಇಸಿ : 98ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :-

VII ಶ್ರೀ ಶರಪ್ಪ ಬಿ. ದರ್ಶನ್‌ಪುರ್(ಇಂಧನ ರಾಜ್ಯ ಸಚಿವರು) ಅವರ ಪರವಾಗಿ
ಭಾರತ ಸಂವಿಧಾನದ ಅನುಚ್ಛೇದ 213 (1)ರ ಮೇರೆಗೆ:-

(1) ದಿನಾಂಕ: 03-05-1999ರಂದು ಸಂವ್ಯಶಾಇ : 40 : ಶಾಸನ : 98ನೇ ಸಂಖ್ಯೆಯ ಅಧಿಸೂಚನೆಯಲ್ಲಿ ಹೊರಡಿಸಿದ ಕರ್ನಾಟಕ ಎಲೆಕ್ಟ್ರಿಸಿಟಿ ರಿಫಾರ್ಮ್ಸ್ ಆದ್ಯಾದೇಶವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

VIII ಶ್ರೀ ಪಿ.ಎಸ್. ಜೈವಂತ್ (ಅಬಕಾರಿ ರಾಜ್ಯ ಸಚಿವರು) ಅವರ ಪರವಾಗಿ

1969ರ ಕರ್ನಾಟಕ ಅಬಕಾರಿ ಕಾಯ್ದೆ ಸೆಕ್ಷನ್ 71 (4)ರ ಅನ್ವಯ

(1) ಕರ್ನಾಟಕ ಅಬಕಾರಿ (ಸುಂಕ ಮತ್ತು ಫೀ) (ತಿದ್ದುಪಡಿ)ನಿಯಮಾವಳಿಗಳು1999ನ್ನು ರಚನೆ ಮಾಡುವ ಸಂಬಂಧದಲ್ಲಿ 05-0-4-1999ರಂದು ಹೊರಡಿಸಿಗ ಎಫ್‌ಡಿ:3ಪಿಇಎಸ್:99ನೇ ಸಂಖ್ಯೆಯ ಅಧಿಸೂಚನೆ

1965ರ ಕರ್ನಾಟಕ ಅಬಕಾರಿ ಕಾಯ್ದೆ ಕಲಂ71(4) ರ ಅನ್ವಯ:

(2) 1999ರ ಕರ್ನಾಟಕ ಅಬಕಾರಿ (ಬಿಯರ್ ಬಿಡಿ ಮಾರಾಟ ಗುತ್ತಿಗೆ) (ತಿದ್ದುಪಡಿ) ನಿಯಮಗಳನ್ನು ರಚಿಸುವ

ಎಫ್‌ಡಿ:3 :ಪಿಇಎಸ್: 99(1)ನೇ ಸಂಖ್ಯೆಯ ಅಧಿಸೂಚನೆ

(3) ಕರ್ನಾಟಕ ಅಬಕಾರಿ (ಬ್ರೇವರಿ) (ತಿದ್ದುಪಡಿ)ನಿಯಮಗಳ 1999ನ್ನು ರಚಿಸುವ ಸಂಬಂಧವಾಗಿ ಸಾರ್ವಜನಿಕರಿಂದ ಆಕ್ಷೇಪಣೆಯನ್ನು ಬಯಸಿ09-06-1999ರಂದು ಹೊರಡಿಸಿದ ಎಫ್‌ಡಿ:3ಪಿಇಎಸ್:99 (2) ನೇ ಸಂಖ್ಯೆಯ ಅಧಿಸೂಚನೆ

(4) 1999ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್ ಹೌಸ್) (ತಿದ್ದುಪಡಿ) ನಿಯಮಗಳನ್ನು ರಚನೆ ಮಾಡುವ ಸಂಬಂಧದಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆ ಬಯಸಿ ದಿನಾಂಕ : 09-06-1999ರಂದು ಹೊರಡಿಸಿದ ಎಫ್‌ಡಿ:3:ಪಿ ಇಎಸ್:99 (3)ನೇ ಸಂಖ್ಯೆಯ ಅಧಿಸೂಚನೆ

(5) 1999ರ ಕರ್ನಾಟಕ ಅಬಕಾರಿ (ದೇಶೀಯ ಮತ್ತು ವಿದೇಶೀಯ ಮಧ್ಯ ಮಾರಾಟ) (ತಿದ್ದುಪಡಿ) ನಿಯಮಗಳನ್ನು ರಚನೆ ಮಾಡುವ ಸಂಬಂಧದಲ್ಲಿ ಸಾರ್ವಜನಿಕರ ಆಕ್ಷೇಪಣೆ ಬಯಸಿ ಎಫ್‌ಡಿ:3ಪಿಇಎಸ್:99 (IV)ನೇ ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಗಳ ಸ್ವೀಕರಿಸುವುದು

ಶ್ರೀ ಅಶೋಕ ಕಾಟ್ಟೆ : ಮಾನ್ಯಅಧ್ಯಕ್ಷರೆ, ಶ್ರೀ ಹೆಚ್. ಎಸ್.ಪ್ರಕಾಶ್ (ಅಧ್ಯಕ್ಷರು ವಿಧಾನಸಭೆಯ ಹಕ್ಕುಬಾಧ್ಯತೆಗಳ ಸಮಿತಿ) ರವರ ಪರವಾಗಿ ವಿಧಾನಸಭೆಯ ಹಕ್ಕುಬಾಧ್ಯತೆಗಳ ಸಮಿತಿಯ 5ನೇ ವರದಿಯನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

ಡಾ:ಎಂ.ಪಿ.ಕರ್ಕಿ: ಮಾನ್ಯಅಧ್ಯಕ್ಷರೆ, ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಪ್ಪ ಅಧ್ಯಕ್ಷರು, ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿರವರ ಪರವಾಗಿ ವಿಧಾನ ಸಭೆಯ ಸರ್ಕಾರಿ ಭರವಸೆಗಳ ಸಮಿತಿಯ3,4ಮತ್ತು5ನೇ ವರದಿಯನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ

ಅಧ್ಯಕ್ಷರು: ವರದಿಗಳನ್ನು ಒಪ್ಪಿಸಲಾಯಿತು.